ಗಮನ ಸೆಳೆಯುವ ಸೂಚನೆ

೧) ಹುಬ್ಬಳ್ಳಿ ನಗರದ ಸೆಂಟ್ರಲ್ ಬಸ್‌ನಿಲ್ದಾಣದ ಹತ್ತಿರ ವೀರರಾಣಿ ಚೆನ್ನಮ್ಮನವರ ಪ್ರತಿಮೆಯನ್ನು ಸ್ಥಾಪಿಸುವ ಬಗ್ಗೆ ತಡೆಯಾಜ್ಞೆ

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಸರ್ಕಾರದವರು ವೀರರಾಣಿ ಚೆನ್ನಮ್ಮನವರ ಪ್ರತಿಮೆಯನ್ನು ಹುಬ್ಬಳ್ಳಿ ನಗರದ ಸೆಂಟ್ರಲ್ ಬಸ್ ನಿಲ್ದಾಣದ ಹತ್ತಿರದ ಉದ್ಯಾನವನದಲ್ಲಿ ಸ್ಥಾಪಿಸಲು ತಡೆಯಾಜ್ಞೆ ನೀಡಿರುವ ಬಗ್ಗೆ ನಾನು ಮಾನ್ಯ ನಗರಾಭಿವೃದ್ಧಿ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—ಮಾನ್ಯ ಅಧ್ಯಕ್ಷರೇ, ಹುಬ್ಬಳ್ಳಿ–ಧಾರವಾಡ ನಗರಪಾಲಿಕೆಯು ೧೯೭೪ರಲ್ಲಿ ಕಿತ್ತೂರು ರಾಣಿ ಚೆನ್ನಮ್ಮನ ಪ್ರತಿಮೆಯನ್ನು ಬಸ್ ನಿಲ್ದಾಣದ ಹತ್ತಿರ ಇರುವ ಟ್ರಾಫಿಕ್ ಐಲ್ಯಾಂಡ್‌ನಲ್ಲಿ ಪ್ರತಿಷ್ಠಾಪನೆ ಮಾಡಲು ನಿರ್ಣಯವನ್ನು ಮಾಡಿತ್ತು, ಆದರೆ ಪ್ರಸ್ತುತ ನಗರಪಾಲಿಕೆಯು ಆ ಪ್ರತಿಮೆಯನ್ನು ಈಜುಕೊಳದ ಹತ್ತಿರ ಇರುವ ಗುಲಾಬಿ ತೋಟದಲ್ಲಿ ಪ್ರತಿಷ್ಠಾಪನೆ ಮಾಡಲು ತೀರ್ಮಾನ ಮಾಡಿದೆ.

ಕಿತ್ತೂರು ರಾಣಿ ಚೆನ್ನಮ್ಮನ ಪ್ರತಿಮೆಯನ್ನು ಟ್ರಾಫಿಕ್ ಐಲ್ಯಾಂಡ್‌ನಲ್ಲಿ ಪ್ರತಿಷ್ಠಾಪನೆ ಮಾಡುವ ಪ್ರಶ್ನೆಯನ್ನು ಚರ್ಚಿಸಲು ಧಾರವಾಡ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಸಭೆ ನಡೆಸಲಾಯಿತು. ಆ ಸಭೆಯಲ್ಲಿ ಕೆಳಕಾಣಿಸಿದ ಅಧಿಕಾರಿಗಳು ಭಾಗವಹಿಸಿದ್ದರು.

೧) ಜಿಲ್ಲಾಧಿಕಾರಿಗಳು
೨) ಆಯುಕ್ತರು, ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳ್ಳಿ
೩) ರಾಷ್ಟ್ರೀಯ ಹೆದ್ದಾರಿಯ ಅಧೀಕ್ಷಿತ ಅಭಿಯಂತರರು.
೪) ಪೋಲೀಸ್ ಅಧೀಕ್ಷಕರು
೫) ಕಾರ್ಯಪಾಲಕ ಅಭಿಯಂತರರು ರಾಜ್ಯ ಹೆದ್ದಾರಿ
೬) ದೂರವಾಣಿಯ ಪ್ರತಿನಿಧಿಗಳು

ಟ್ರಾಫಿಕ್ ಐಲ್ಯಾಂಡ್‌ನಲ್ಲಿ ಸಂಚಾರ ಒತ್ತಡ ಇರುವುದರಿಂದ ಮತ್ತು ಸಂಚಾರ ನಿಯಂತ್ರಣ ಮಾಡಲೋಸುಗ ಆ ಸ್ಥಳದಲ್ಲಿ ಪ್ರತಿಮೆಯನ್ನು ಪ್ರತಿಷ್ಠಾಪನೆ ಮಾಡುವುದು ಸೂಕ್ತವಲ್ಲವೆಂದು ಈ ಸಭೆಯಲ್ಲಿ ತೀರ್ಮಾನ ಮಾಡಲಾಯಿತು ತರುವಾಯ ಹುಬ್ಬಳ್ಳಿ–ಧಾರವಾಡ ಮಹಾನಗರಸಭೆಯು ಈಜುಕೊಳದ ಹತ್ತಿರ ಇರುವ ಗುಲಾಬಿ ತೋಟದಲ್ಲಿ ಪ್ರತಿಷ್ಠಾಪನೆ ಮಾಡಲು ೨೨–೭–೧೯೮೭ರಂದು ತೀರ್ಮಾನ ತೆಗೆದುಕೊಂಡಿದೆ.

ಈ ತೀರ್ಮಾನಕ್ಕೆ ವಿರುದ್ಧವಾಗಿ ೨೫–೮–೧೯೮೭ ರಂದು ಸರ್ಕಾರಕ್ಕೆ ಪರಿಷ್ಕೃತ ಅರ್ಜಿಯಲ್ಲಿ ಸಲ್ಲಿಸಿ ಕಿತ್ತೂರು ರಾಣಿಯ ಪ್ರತಿಮೆಯನ್ನು ಮೊದಲೇ ತೀರ್ಮಾನ ಮಾಡಿರುವಂತೆ ಟ್ರಾಫಿಕ್ ಐಲ್ಯಾಂಡ್‌ನಲ್ಲಿ ಪ್ರತಿಷ್ಠಾಪನೆ ಮಾಡಬೇಕೆಂದು ಕೋರಿದ್ದಾರೆ.

ಈ ವಿಷಯವು ಸಾರ್ವಜನಿಕ ದೃಷ್ಟಿಯಿಂದ ಅತಿ ಮುಖ್ಯವಾದ ವಿಷಯವಾದುದರಿಂದ ಸರ್ಕಾರವು ತೀರ್ಮಾನ ತೆಗೆದುಕೊಳ್ಳಲು ಪರಿಶೀಲಿಸುತ್ತಿದೆ. ಈ ಮಧ್ಯೆ ಈ ವಿಷಯವು ಸರ್ಕಾರದಲ್ಲಿ ತೀರ್ಮಾನವಾಗುವವರೆಗೆ ಕಿತ್ತೂರು ರಾಣಿ ಚೆನ್ನಮ್ಮನ ಪ್ರತಿಮೆಯ ಪ್ರತಿಷ್ಠಾಪನಾ ಕಾರ್ಯಕ್ರಮವನ್ನು ಮುಂದೂಡಬೇಕೆಂದು ಹುಬ್ಬಳ್ಳಿ–ಧಾರವಾಡ ಮಹಾನಗರಸಭೆಯ ಆಯುಕ್ತರಿಗೆ ಆಜ್ಞೆ ಮಾಡಲಾಗಿದೆ.

ಶ್ರೀ ಕೆ.ಹೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ನೆನ್ನೆ ದಿವಸ ಕಿತ್ತೂರು ರಾಣಿ ಚೆನ್ನಮ್ಮನ ಪ್ರತಿಮೆಯನ್ನು ಸ್ಥಾಪನೆ ಮಾಡುವುದಕ್ಕೂ ಮತ್ತು ಅಲ್ಲಿ ಪ್ರಾರಂಭವಾಗಿದ್ದ ಲಾಟರಿ ಯೋಜನೆಗೂ ಸಂಬಂಧವಿಲ್ಲವೆಂದು ಹೇಳಿದ್ದರು. ಆದರೆ ನಾನು ತಮ್ಮ ಮುಖಾಂತರ ಇದೇ ವಿಚಾರದಲ್ಲಿ ಹಿಂದೂ ಪತ್ರಿಕೆಯಲ್ಲಿ ಪ್ರಕಟವಾಗಿರುವ ವರದಿಯನ್ನು ಮಾನ್ಯ ಸಚಿವರಿಗೆ ಕಳುಹಿಸಿಕೊಡುತ್ತೇನೆ. ಈ ಲಾಟರಿ ಯೋಜನೆಯನ್ನು ಕಿತ್ತೂರು ರಾಣಿ ಚೆನ್ನಮ್ಮನ ಪ್ರತಿಮೆಯನ್ನು

ಸ್ಥಾಪನೆ ಮಾಡುವ ಸಂಬಂಧದಲ್ಲಿ ಕೈಗೊಳ್ಳಲಾಗಿದೆ ಎಂದು ಇದರಲ್ಲಿ ಪ್ರಕಟವಾಗಿದೆ. ಈ ಲಾಟರಿ ಯೋಜನೆ ಮೂಲಕ ಸಾಕಷ್ಟು ಹಣವನ್ನು ಶೇಖರಣೆ ಮಾಡಿದ ಮೇಲೆ ಆ ಹಣವೆಲ್ಲಾ ಎಲ್ಲಿ ಹೋಯಿತು ? ಇದಕ್ಕೆ ಸಂಬಂಧಪಟ್ಟಂತೆ ಒಬ್ಬ ಮಂತ್ರಿಯ ಹೆಸರನ್ನು ಹೇಳುತ್ತಿದ್ದಾರೆ. ಆ ಮಂತ್ರಿ ಯಾರು ಎಂದು ನಾನು ಇಲ್ಲಿ ಉಲ್ಲೇಖ ಮಾಡುವುದಿಲ್ಲ. ಈ ಲಾಟರಿ ಯೋಜನೆಯಿಂದ ಸಂಗ್ರಹವಾದ ಪೂರ್ಣ ಹಣವನ್ನು ಈ ಮಂತ್ರಿಗಳು ಕೇಳಿದಾಗ, ಹಣ ಸಂಗ್ರಹಣೆ ಮಾಡಿದವರು ಪೂರ್ತಾ ಹಣವನ್ನು ಕೊಡಲು ಒಪ್ಪದಿದ್ದಾಗ, ಈ ಮಂತ್ರಿಗಳು ಪ್ರತಿಮೆ ಸ್ಥಾಪನೆಯ ಜಾಗವನ್ನು ಬದಲಾಯಿಸಿ ಮಾಡಬೇಕೆಂದು ಆದೇಶವಿತ್ತರೆಂದು ಹೇಳುತ್ತಿದ್ದಾರೆ. ನಾನು ಹೆಸರು ಹೇಳಲು ಹೋಗುವುದಿಲ್ಲ. ಅವಶ್ಯಕತೆ ಬಂದಾಗ ಹೆಸರು ಹೇಳುತ್ತೇನೆ. ಈಗ ಪ್ರತಿಮೆ ಪ್ರತಿಸ್ಥಾಪನೆ ಮಾಡುವ ಕೆಲಸ ಬಂದ್ ಆಗಿದೆ. ಈಗಾಗಲೇ ಇದನ್ನು ಪ್ರತಿಸ್ಥಾಪನೆ ಮಾಡುವ ಸಂಬಂಧವಲ್ಲಿ ಸುಮಾರು ೫೦ ಸಾವಿರ ರೂಪಾಯಿಗಳವರೆಗೆ ಖರ್ಚಾಗಿದೆ. ಈಗ ನೀವು ಜಾಗ ಬದಲಾಯಿಸಿ ಮಾಡುವುದಾದರೆ ಖರ್ಚಾದ ಹಣವನ್ನು ಯಾರ ಕಡೆಯಿಂದ ವಸೂಲಿ ಮಾಡುತ್ತೀರಿ ? ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ನೆನ್ನೆದಿವಸ ನಿಮ್ಮ ಪಕ್ಷದವರೇ ಆದ ಆಲ್ಲಿನ ಮೇಯರ್ ಅವರು ತಮ್ಮ ಮೇಯರ್ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದಾರೆ ದೆಹಲಿಗೆ ಹೋಗುವುದಾಗಿ ಹೇಳಿದ್ದ ಮಂತ್ರಿಗಳೊಬ್ಬರು ಅಲ್ಲಿಗೆ ಹೋಗದೆ ಹುಬ್ಬಳ್ಳಿಗೆ ಹೋಗಿ ಈ ಪ್ರತಿಮೆ ಪ್ರತಿಸ್ಥಾಪನೆ ವಿಷಯದಲ್ಲಿ ಕೈಹಾಕಿದ್ದಾರೆಂದು ಪತ್ರಿಕೆಗಳಲ್ಲಿ ವರದಿ ಆಗಿದೆ. ಆದ್ದರಿಂದ ಸಾಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಇಂತಹ ಒಂದು ಅವ್ಯವಹಾರವನ್ನು ಸೂಕ್ಷ್ಮವಾಗಿ ಪರಿಶೀಲನೆ ಮಾಡಿ ಒಂದು ಯೋಗ್ಯವಾದ ನಿರ್ಣಯವನ್ನು ಕೈಕೊಳ್ಳಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಕಿತ್ತೂರು ಚೆನ್ನಮ್ಮ ಪ್ರತಿಮೆಯನ್ನು ಪ್ರತಿಸ್ಥಾಪನೆ ಮಾಡಬೇಕೆಂದು ೫೦ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಆದರೆ ಈ ಹಣವನ್ನು ವ್ಯರ್ಥವಾಗಿ ಖರ್ಚು ಮಾಡಿರುವುದು ಮತ್ತೆ ಮೂರ್ತಿಯನ್ನು ಪ್ರತಿಸ್ಥಾಪನೆ ಮಾಡದೆ ಇರುವುದು ನಿಜಕ್ಕೂ ಕರ್ನಾಟಕದ ಜನತೆಗೆ ನಾಚಿಕೆಗೇಡಿತನವಾಗುತ್ತದೆ. ಅವನ್ನು ಮಾಡುವುದಕ್ಕೆ ಹೋಗಬೇಡಿ. ಅದನ್ನು ತಾವು ದಯವಿಟ್ಟು ಪುನರ್‌ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ಮತ್ತೆ ಈಗಾಗಲೇ ರಾಜೀನಾಮೆ ಕೊಟ್ಟಿದ್ದ ಮೇಯರ್‌ರವರ ಬಗ್ಗೆ ಪರಿಶೀಲನೆ ಮಾಡಿ ಅವರಿಗೆ ನೀವು ರಾಜೀನಾಮೆ ಕೊಟ್ಟಿರುವುದು ಸರಿಯಲ್ಲ, ಅದನ್ನು ತಾವು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಹೇಳಿದ್ದೀರಿ. ಈಗ ಅವರು ಮತ್ತೆ ಮೇಯರ್ ಆಗಿ ಮುಂದುವರಿಯುತ್ತಿದ್ದಾರೆ. ಅವರು ನಿಮ್ಮ ಪಕ್ಷದವರೇ, ಇದರಿಂದ ನಿಮ್ಮ ಪಕ್ಷವೇ ಬೆಳೆಯಲಿ, ಎಲ್ಲಾ ಕಡೆಯೂ ನಿಮ್ಮ ಪಕ್ಷವೇ ಮುಂದುವರಿಯಲಿ, ನಾವು ಬೇಡವೆಂದು ಹೇಳುವುದಿಲ್ಲ. ಆದರೆ ಸಾರ್ವಜನಿಕರ ಹಣವನ್ನು ದುರುಪಯೋಗ ಮಾಡುವುದು ಸರಿಯಲ್ಲ. ಇದರ ಬಗ್ಗೆ ತಮ್ಮಿಂದ ಸರಿಯಾದಂತ ಉತ್ತರ ಬರಲಿಲ್ಲ. ನಾನು ನಿಮ್ಮಿಂದ ಇಂತಹ ಉತ್ತರವನ್ನು ನಿರೀಕ್ಷೆಮಾಡಿರಲಿಲ್ಲ. ಆದ್ದರಿಂದ ಈಗಲಾದರೂ ಇದನ್ನು ಲೋಕಾಯುಕ್ತಕ್ಕೆ ಕಳುಹಿಸಿ ಪರಿಶೀಲನೆ ಮಾಡಿಸಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಕೆ.ಹೆಚ್. ಪಾಟೀಲ್‌ರವರು ಈ ಪುತ್ಥಳಿಯ ಅನಾವರಣವನ್ನು ಮಾಡುವಂತಹ ಪ್ರದೇಶದ ಬಗ್ಗೆ ೧೯೭೪ರಲ್ಲಿ ಒಂದು ವೃತ್ತದ ಹತ್ತಿರ ಪ್ರತಿಸ್ಥಾಪನೆ ಮಾಡಬೇಕೆಂದು ತೀರ್ಮಾನ ಮಾಡಿದ್ದರು ಎಂದು ಹೇಳಿದರು ಈಗ ೧೯೭೪ರಲ್ಲಿ ಅದನ್ನು ಮತ್ತೆ ಪರಿಶೀಲನೆ ಮಾಡಲಾಗಿ ಅಲ್ಲಿನ ಅಧಿಕಾರಿಗಳು ಆ ಸ್ಥಳದಲ್ಲಿ ವಾಹನಗಳ ಓಡಾಟ ಜಾಸ್ತಿಯಾಗಿದೆ ಮತ್ತು ಅಲ್ಲಿ ಟ್ರಾಫಿಕ್ ಲೈಟ್ ಹಾಕಬೇಕೆಂದು ಒಂದು ವ್ಯವಸ್ಥೆ ಇರುವುದರಿಂದ, ಆ ಸರ್ಕಲ್ ಹತ್ತಿರ ಪುತ್ಥಳಿಯನ್ನು ಪ್ರತಿಸ್ಥಾಪನೆ ಮಾಡಿದರೆ ಓಡಾಟಕ್ಕೆ ತೊಂದರೆಯಾಗುತ್ತದೆ ಎಂದು ಹೇಳಿದ್ದಾರೆ. ಆದ್ದರಿಂದ ಆ ಸ್ಥಳದ ಬದಲು ಬೇರೆ ಸ್ಥಳವನ್ನು ಪರಿಶೀಲನೆ ಮಾಡಿ ಒಂದು ಹೂದೋಟದಲ್ಲಿ ಅಥವಾ ಒಂದು ಪಾರ್ಕಿನ ಪಕ್ಕದಲ್ಲಿ ಪುತ್ಥಳಿಯನ್ನು ಸ್ಥಾಪಿಸಬೇಕೆಂದು ಹೇಳಿದ್ದಾರೆ. ಮೊನ್ನೆ ಹೋದ ತಿಂಗಳು ೨೭ನೇ ತಾರೀಖು ಈ ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ಆ ಸ್ಥಳದಲ್ಲಿ ಈ ೫೦ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಪೆಡಸ್ಟಲ್‌ನ್ನು ಕಟ್ಟಿದ್ದಾರೆ. ಆದರೆ ಈ ಹಿಂದೆ ಮಾಡಿದ ತೀರ್ಮಾನದ ಪ್ರಕಾರ - ಕೆಲವರು ಈಗಾಗಲೇ ಆ ವೃತ್ತಕ್ಕೆ ಕಿತ್ತೂರು ಚೆನ್ನಮ್ಮ ವೃತ್ತವೆಂದು ಹೆಸರನ್ನು ಇಟ್ಟಿದ್ದಾರೆ. ಈಗ ಇದರ ಬಗ್ಗೆ ಜನರಲ್ಲಿ ಭಿನ್ನಾಭಿಪ್ರಾಯ ಉಂಟಾಗಿದೆ. ಕೆಲವರು ಮೊದಲು ತೀರ್ಮಾನಿಸಿದ್ದ ವೃತ್ತದಲ್ಲಿಯೇ ಪುತ್ಥಳಿಯನ್ನು ಪ್ರಸ್ಥಾಪಿಸಬೇಕೆಂದೂ ಮತ್ತೆ ಕೆಲವರು ಈಗ ತೀರ್ಮಾನಿಸಿರುವ ವೃತ್ತದಲ್ಲಿಯೇ ಆಗಬೇಕೆಂದು ಹೇಳುತ್ತಿದ್ದಾರೆ. ಆದರೂ ಕೂಡ ಮಹಾನಗರ ಪಾಲಿಕೆಯವರು ಆ ಪ್ರತಿಮೆಯನ್ನು ಆ ವೃತ್ತದಲ್ಲಿ ಇಡುವುದು ಬೇಡವೆಂದು ಹೇಳಿದ್ದಾರೆ. ಅದಕ್ಕೆ ಬೇರೆ ಪಾರ್ಕನ್ನು ಸೂಚನೆ ಮಾಡಿದ್ದಾರೆ. ಈ ಎರಡು ವಿಷಯಗಳು ನಮ್ಮ ಸರ್ಕಾರದ ಮುಂದೆ ಇದೆ. ಈ ಎರಡನ್ನು ಪರಿಶೀಲಿಸುವ ಆತುರದಲ್ಲಿ ಪುತ್ಥಳಿ ಇನ್ನು

ಬಂದಿರಲಿಲ್ಲ. ಮೊನ್ನೆ ಸೋಮವಾರ ಬಂತು. ಆದು ಬಂದ ತಕ್ಷಣವೇ ಆದರ ಸ್ಥಾಪನೆಯಾಗ ಬೇಕೆಂದು ಹೇಳಿದರು. ಈ ಕಾರ್ಯಕ್ರಮಕ್ಕೆ ನಾನು ಮತ್ತು ಮಾನ್ಯ ಜೊವ್ಮಾಯಿ ಅವರು ಹೊಗ ಬೇಕಾಗಿತ್ತು. ಆದರೆ ಇದರ ಬಗ್ಗೆ ಮೇಲ್ಮನವಿ ಬಂದ ಕಾರಣ, ನಾವು ಪ್ರವಾಸ ಮಾಡಲಿಲ್ಲ. ಈ ಮನವಿಯನ್ನು ಪರಿಶೀಲನೆ ಮಾಡಬೇಕಾಗುತ್ತದೆ. ಇದರ ಬಗ್ಗೆ ಒಂದು ತೀರ್ಮಾನ ತೆಗೆದುಕೊಳ್ಳ ಬೇಕಾಗುತ್ತದೆ. ಹಾಗೇ ತೀರ್ಮಾನ ತೆಗೆದುಕೊಳ್ಳುವಾಗ ನಾವು ಜನರ ಅಭಿಪ್ರಾಯಕ್ಕೆ ಅನುಗುಣ ವಾಗಿಯೇ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಆದ್ದರಿಂದಲೇ ನಾವು ಮತ್ತು ಮಾನ್ಯ ಜೊವ್ಮಾಯಿಯವರು ಅಲ್ಲಿಗೆ ಹೋಗಲಿಕ್ಕೆ ತಯಾರಿದ್ದರು. ಅಲ್ಲಿ ಗೊಂದಲ ಬಂದ ಕಾರಣ ಮತ್ತೆ ರಾಜಕೀಯವನ್ನು ಉಪಯೋಗ ಮಾಡಿಕೊಂಡು ಏನಾದರು ಮಾಡುತ್ತಾರೆ ಎಂದು ಹೇಳುತ್ತಾರೆ ಎಂದು ಅಲ್ಲಿಗೆ ಹೋಗಲಿಲ್ಲ. ಇಲ್ಲಿಯೇ ಕುಳಿತು ಇದಕ್ಕೆ ಒಂದು ಪರಿಹಾರವನ್ನು ಮಾಡಬೇಕೆಂದು ತೀರ್ಮಾನಿಸಿದ್ದೇವೆ. ಆದರೆ ಇದನ್ನು ನಾವು ಲೋಕಾಯುಕ್ತಕ್ಕೆ ಕೊಡುವಂತಹ ವಾತಾವರಣವನ್ನು ಉಂಟುಮಾಡುವುದಿಲ್ಲವೆಂದು ನನಗೆ ವಿಶ್ವಾಸವಿದೆ. ಇದನ್ನು ಎಲ್ಲರಿಗೂ ಒಪ್ಪಿಗೆಯಾಗುವ ರೀತಿಯಲ್ಲಿ ಮಾಡುತ್ತೇವೆ.

ಶ್ರೀ ಕೆ ಜೆಟ್ ಪಾಟೀಲ್.—ಮಾನ್ಯ ಅಧ್ಯಕ್ಷರೇ, ಹುಬ್ಬಳ್ಳಿ-ಧಾರವಾಡ ಮುನಿಸಿಪಲ್‌ನವರು ಠರಾವನ್ನು ಮಾಡಿದೆಯೇ ಅವರಿಗೆ ನೀವು ರೊಕ್ಕವನ್ನು ಕೊಟ್ಟಿದ್ದೀರಿ. ಸಾಲ ಕೊಡಿ ಎಂದು ಅವರು ಕೇಳಿದೆಯೇ ಅವರಿಗೆ ಗ್ರಾಂಟನ್ನು ಕೊಟ್ಟಿದ್ದೀರಿ. ಅದಕ್ಕೆ ಬೇರೊಂದು ಇತಿಹಾಸವಿದೆ. ನಾನು ಯಾರನ್ನು ಆಪಾದನೆ ಮಾಡುವುದಕ್ಕೆ ಹೋಗುವುದಿಲ್ಲ. ಮತ್ತೆ ನಾನು ಮಾನ್ಯ ಜೊವ್ಮಾಯಿ ಅವರ ಬಗ್ಗೆ ಮಾತನಾಡಲೇ ಇಲ್ಲ. ನಾನು ನಿಮ್ಮ ಬಗ್ಗೆ ಮಾತ್ರ ಮಾತನಾಡಿದ್ದು. ಈಗ ಮಾನ್ಯ ಅಧ್ಯಕ್ಷರೇ, ತಮ್ಮ ಎದುರಿಗೆ ನಾನು ಪತ್ರಿಕೆಯನ್ನು ಕೊಟ್ಟಿದ್ದೇನೆ. ಆ ಪತ್ರಿಕೆಯನ್ನು ನೋಡಿ. ಅದರಲ್ಲಿ ಲಾಟರಿ ಟಿಕೇಟನ್ನು ಸ್ಪಷ್ಟವಾಗಿ ಪ್ರಿಂಟ್ ಮಾಡಿದ್ದಾರೆ. ಎಷ್ಟು ಪ್ರಿಂಟ್ ಮಾಡಿದ್ದಾರೆ ಎಂದು ತಾವೇನಾದರೂ ಎನ್‌ಕ್ವೈರಿ ಮಾಡಿದ್ದೀರಾ ? ಯಾವ ಯಾವುದೋ ವಿಷಯಗಳನ್ನು ಎನ್‌ಕ್ವೈರಿ ಮಾಡಿಸುತ್ತೀರಿ. ಕೆಲವೊಮ್ಮೆ ಅವುಗಳನ್ನು ಸಿ.ಬಿ.ಐ.ಗೆ ಕಳುಹಿಸುತ್ತೀರಿ. ಇದನ್ನೇಕೆ ಎನ್‌ಕ್ವೈರಿ ಮಾಡಿಸುವುದಿಲ್ಲ ? ಮತ್ತೆ ಒಂದು ಕಾರ್ಪೊರೇಷನ್‌ನಲ್ಲಿ ನ್ಯಾಯಯುತವಾಗಿ ಆಗಿರು ವಂತಹ ಒಂದು ಠರಾವನ್ನು ಅನುಸರಿಸಿ ೫೦ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ ಮೇಲೆ ಅದನ್ನು ರದ್ದು ಮಾಡಿ ತಮ್ಮ ಹಿರೇತನವನ್ನು ತೋರಿಸಿಕೊಳ್ಳುವುದಕ್ಕೆ ಮಾಡಿದ್ದೀರಿ. ಇದನ್ನು ಮಾಡುವುದಕ್ಕೆ ನಿಮಗೆ ಯಾವ ಅಧಿಕಾರ ಇದೆ ? ಇದು ನಿಮಗೆ ಸರಿ ಕಾಣದಿದ್ದರೆ, ಈ ಹಿಂದೆ ಖರ್ಚು ಮಾಡಿರುವಂತಹ ಹಣವನ್ನು ಜನರಿಂದ ವಸೂಲು ಮಾಡಿ. ಇಲ್ಲದಿದ್ದರೆ ಸುಮ್ಮನೇ ಏಕೆ ನೀವು ಕೈಹಾಕುತ್ತೀರಿ ? ಹೀಗೆ ಮಾಡಲು ನಿಮಗೆ ಅಧಿಕಾರವಿಲ್ಲ ಅಲ್ಲಿರುವ ಜನತಾ ಪಾರ್ಟಿಯ ವರನ್ನು ನೀವು ಹೊರಗೆ ಕರೆದು ಹೇಳಿ. ಅದನ್ನು ಬಿಟ್ಟು ಕಾರ್ಪೊರೇಷನ್ ಆಫೀಸ್‌ನಲ್ಲೇ ಹೋಗಿ ಮಂತ್ರಿಗಳು ಅಲ್ಲಿಯೇ ಕೂತು ಆ ಒಂದು ಇಡೀ ಆಫೀಸನ್ನೇ ಜನತಾ ಪಾರ್ಟಿ ಆಫೀಸು ಮಾಡುವುದು ಸರಿಯಲ್ಲ. ಈ ರೀತಿ ಮಾಡುವುದು ಪ್ರಜಾಪ್ರಭುತ್ವಕ್ಕೆ ಅವಹೇಳನ ಮಾಡಿದಂತಾಗುತ್ತದೆ ಮತ್ತು ಇದರಿಂದ ಅಪ್ರಾಮಾಣಿಕತೆ ಹೆಚ್ಚಾಗುತ್ತದೆ ಎಂದು ನಾನು ಇದರ ಬಗ್ಗೆ ಎಚ್ಚರಿಕೆ ಕೊಡುತ್ತೇನೆ.

ಶ್ರೀ ಮಲ್ಲಾರಿ ಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ೧೯೭೪ರಲ್ಲಿ ಇದು ನಿರ್ಣಯ ವಾಗಿದ್ದು, ಪ್ರತಿಮೆಯನ್ನು ಸ್ಥಾಪಿಸಬೇಕಾಗಿತ್ತು. ಆದರೆ ಈ ನಿರ್ಣಯವಾಗಿ ೧೩ ವರ್ಷಗಳಾದರೂ ಪ್ರತಿಮೆಯನ್ನು ಸ್ಥಾಪನೆ ಮಾಡುವುದಕ್ಕೆ ಯಾವುದೇ ರೀತಿಯ ಕಾರ್ಯಕ್ರಮಗಳನ್ನು ಇನ್ನೂ ತೆಗೆದುಕೊಂಡಿಲ್ಲ ಇದರಿಂದ ದೊಡ್ಡ ಹೋರಾಟವೇ ಆಗುವ ಸಂಭವವಿದೆ. ಈ ಹೋರಾಟಕ್ಕೆ ಅವಕಾಶ ಮಾಡಿಕೊಡಬಾರದೆಂದು ನಾನು ಹೇಳುತ್ತೇನೆ. ಮತ್ತೆ ಆ ವೃತ್ತದಲ್ಲಿ ಪ್ರತಿಮೆಯನ್ನು ಸ್ಥಾಪನೆ ಮಾಡುವುದಕ್ಕೆ ಯಾವ ಕ್ರಮವನ್ನು ತೆಗೆದುಕೊಳ್ಳುತ್ತೀರಿ ? ಮತ್ತೆ ಮಾನ್ಯ ಕೆ.ಜೆಟ್. ಪಾಟೀಲ್‌ರವರು ಹೇಳಿದಂತೆ, ಲಾಟರಿ ಟಿಕೇಟ್ ವಿಷಯದ ಪತ್ರಿಕೆಯಲ್ಲಿ ಬಂದಿದೆ, ಇದರ ಬಗ್ಗೆ ತಾವು ಯಾವ ಕ್ರಮವನ್ನು ತೆಗೆದುಕೊಳ್ಳುತ್ತೀರಿ ? ಮತ್ತೆ ಈಗ ಯಾರೋ ಆರು ಜನ ಅಧಿಕಾರಿಗಳು ಕೂಡಿಕೊಂಡು ಆ ವೃತ್ತದ ಹತ್ತಿರ ಒತ್ತಡ ಬರುವುದರಿಂದ ಮತ್ತು ಟ್ರಾಫಿಕ್ ಒತ್ತಡ ಹೆಚ್ಚಾಗುವುದ ರಿಂದ ಆ ಪ್ರತಿಮೆಯನ್ನು ಆ ವೃತ್ತದಲ್ಲಿ ಸ್ಥಾಪನೆ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದ್ದಾರೆ, ಆದರೆ ಸಾರ್ವಜನಿಕರು ಆ ವೃತ್ತದಲ್ಲಿಯೇ ಆ ಮೂರ್ತಿಯನ್ನು ಪ್ರತಿಸ್ಥಾಪನೆ ಮಾಡಬೇಕೆಂದು ಹಠ ಹಿಡಿದಿದ್ದಾರೆ. ಇದರ ಬಗ್ಗೆ ತಾವು ಯಾವ ರೀತಿಯ ತೀರ್ಮಾನ ತೆಗೆದುಕೊಳ್ಳುತ್ತೀರಿ ? ತೀರ್ಮಾನ ತೆಗೆದುಕೊಳ್ಳುವವರೆಗೆ ಆ ಪುತ್ಥಳಿಯನ್ನು ಎಲ್ಲಿ ಇಡುತ್ತೀರಿ ? ಈಗಾಗಲೇ ೧೩ ವರ್ಷಗಳಾದರೂ ನಿಮ್ಮ ಸರ್ಕಾರದವರೇ ಆಗಲೀ, ಹಿಂದಿದ್ದ ಸರ್ಕಾರದವರೇ ಆಗಲಿ ಇದಕ್ಕೆ ವಿಶೇಷವಾದಂತಹ

ಯಾವುದೇ ಒಂದು ಯೋಜನೆಯನ್ನು ಮಾಡಿಲ್ಲ. ಇದರ ಬಗ್ಗೆ ಅಲ್ಲಿನ ಜನರನ್ನು, ಸಂಬಂಧಪಟ್ಟ ಅಧಿಕಾರಿಗಳನ್ನು ಹಾಗೂ ಶಾಸಕರನ್ನು ಬರಮಾಡಿಕೊಂಡು ಯಾವುದೇ ಒಂದು ನಿರ್ಣಯವನ್ನು ಮಾಡದೇ ಹೋದರೆ ತೀವ್ರ ಪ್ರತಿಭಟನೆಯಾಗುತ್ತದೆಂದು ನಾನು ಎಚ್ಚರಿಕೆ ಕೊಡುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ಇಲ್ಲಿ ಮಾನ್ಯ ಕೆ.ಹೆಚ್. ಪಾಟೀಲ್‌ರವರು ಹೇಳುತ್ತಾರೆ, ಬದಲಾವಣೆಯಾಗಿರುವ ಪ್ರದೇಶದಲ್ಲಿ ಕಾರ್ಪೋರೇಷನ್‌ರವರು ಸುಮಾರು ಐವತ್ತು ಸಾವಿರ ರೂಪಾಯಿಯನ್ನು ವೆಚ್ಚ ಮಾಡುವ ನಿರ್ಧಾರವನ್ನು ತೆಗೆದುಕೊಳ್ಳಬೇಕು, ನೀವು ಏಕೆ ಅದರಲ್ಲಿ ಪ್ರವೇಶ ಮಾಡುತ್ತೀರಿ ಎಂದು ಹೇಳುತ್ತಾರೆ. ಬೆಳಗಾಂನ ಮಾನ್ಯ ಪಾಟೀಲರು ಆ ಸ್ಥಳದಲ್ಲಿಯೇ ಮೂರ್ತಿಯನ್ನು ಪ್ರತಿಸ್ಥಾಪಿಸಬೇಕು, ಇಲ್ಲದಿದ್ದರೆ ವಿಪರೀತ ತೊಂದರೆಯಾಗುತ್ತದೆಂದು ಹೇಳುತ್ತಾರೆ. ಇದನ್ನು ನೋಡಿದರೆ ಆರಿಬ್ಬರಲ್ಲಿಯೇ ವ್ಯತ್ಯಾಸ ಕಾಣುತ್ತದೆ.

(ಗೊಂದಲ)

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ವ್ಯತ್ಯಾಸವೇನೂ ಇಲ್ಲ, ಪ್ರಶ್ನೆಗಳು ಮಾತ್ರ ಬೇರೆ ಬೇರೆಯಾಗಿದೆ.

(ಗೊಂದಲ)

ಶ್ರೀ ಎಂ. ಚಂದ್ರಶೇಖರ್.— ಮೊದಲು ೧೯೭೪ರಲ್ಲಿ ಏನು ತೀರ್ಮಾನವಾಗಿತ್ತೋ ಅಲ್ಲೇ ಪುತ್ಥಳಿಯನ್ನು ಹಾಕಬೇಕೆಂದು ನಿಮ್ಮ ಅಭಿಪ್ರಾಯ, ಅದರೆ ಮಾನ್ಯ ಪಾಟೀಲರ ಅಭಿಪ್ರಾಯ.....

(ಗೊಂದಲ)

ಶ್ರೀ ಕೆ. ಹೆಚ್. ಪಾಟೀಲ್.—ಒಂದು ಠರಾವನ್ನು ಮಾಡಿದ ಮೇಲೆ ಅದನ್ನು ಪಾಲನೆ ಮಾಡುವುದು ಜನರ ಕರ್ತವ್ಯ, ನಿಮ್ಮ ಕರ್ತವ್ಯ ಹಾಗೂ ನಮ್ಮ ಕರ್ತವ್ಯವಾಗಿದೆ....

(ಗೊಂದಲ)

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ೨೨-೭-೮೭ರಲ್ಲಿ ಈ ಠರಾವನ್ನು ಮಾಡಿದರು...

(ಗೊಂದಲ)

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ನಮ್ಮಲ್ಲಿ ಭಿನ್ನಾಭಿಪ್ರಾಯ ಇದೆಯೆಂದು ಹೇಳುತ್ತಿದ್ದಾರೆ, ಆದರೆ ನಮ್ಮಲ್ಲಿ ಯಾವ ರೀತಿಯ ಭಿನ್ನಾಭಿಪ್ರಾಯವೂ ಇಲ್ಲ, ಅವರು ಸಾರ್ವಜನಿಕ ಅಭಿಪ್ರಾಯ ಏನು ಇದೆ ಅದಕ್ಕೇ ಮನ್ನಣೆ ಕೊಡುತ್ತಾರೆಯೇ ಎಂದು ಕೇಳುತ್ತೇನೆ. ಮಾನ್ಯ ಪಾಟೀಲ್‌ರವರು ಹೇಳಿದಹಾಗೆ, ಏನು ಬದಲಾವಣೆಯಾಗಿದೆ ಅದಕ್ಕೆ ಈಗಾಗಲೇ ಸರ್ಕಾರದವರು ತಡೆಮಾಡಿದ್ದಾರೆ. ಆದ್ದರಿಂದ ಜನಸಾಮಾನ್ಯರ ಅಭಿಪ್ರಾಯ ಏನು ಇದೆ ಅದನ್ನು ಅವರು ಒಪ್ಪುತ್ತಾರೆಯೋ ಇಲ್ಲವೋ?

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ನಗರಪಾಲಿಕೆಯಿಂದ ಮೇಲೆ ಅಲ್ಲಿ ಜನರ ಪ್ರತಿನಿಧಿಗಳು ಇರುತ್ತಾರೆ. ನಾವು ಏನೊಂದು ತೀರ್ಮಾನವನ್ನು ಮಾಡುವಾಗಲೂ ಆ ಜನರ ಪ್ರತಿನಿಧಿಗಳ ಒಂದು ಅಭಿಪ್ರಾಯ ಹಾಗೂ ಜವಾಬ್ದಾರಿಯನ್ನು ತೆಗೆದುಕೊಂಡು ಮಾಡುತ್ತೇವೆ. ನಗರಪಾಲಿಕೆಯಲ್ಲಿ ಯಾವುದೇ ಒಂದು ತೀರ್ಮಾನ ಮಾಡುವಾಗ ಅದಕ್ಕೆ ಜನರ ಅಭಿಪ್ರಾಯವನ್ನು ಕಡೆದು ಮಾಡಿರುತ್ತಾರೆ ಎನ್ನುವ ಅಭಿಪ್ರಾಯಕ್ಕೆ ನಾವು ಬರಬೇಕಾಗುತ್ತದೆ. ಮೊತ್ತೊಮ್ಮೆ ಪರಿಶೀಲನೆ ಮಾಡಿ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

೧೦.೦೦ ಪಿ.ಎಂ.

೨) ಸಾಗರ ತಾಲ್ಲೂಕು ಕಳಸವಳ್ಳಿ ಗ್ರಾಮದಲ್ಲಿ ನಡುತೋಪು ಮಾಡುವಾಗ ಮೈಸೂರು ಕಾಗದ ಕಾರ್ಖಾನೆಯ ಅಧಿಕಾರಿಗಳು ಸಾರ್ವಜನಿಕರ ಮೇಲೆ ಹಲ್ಲೆ ಮಾಡಿರುವುದರ ಬಗ್ಗೆ

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ಸಾಗರ ತಾಲ್ಲೂಕಿನ ಕಳಸವಳ್ಳಿ ಗ್ರಾಮದ ಸರ್ವೆ ನಂ. ೮೧ರಲ್ಲಿ ''ನೆಡುತೋಪು'' ಮಾಡುವ ಬಗ್ಗೆ ತಡೆಯಾಜ್ಞೆ ಕೊಟ್ಟಿದ್ದರೂ ಸಹ ಸದರಿ ಸ್ಥಳದಲ್ಲಿ ''ನೆಡುತೋಪು'' ಮಾಡುವ ಬಗ್ಗೆ ಸಾರ್ವಜನಿಕರ ಮೇಲೆ ಮೈಸೂರು ಕಾಗದ ಕಾರ್ಖಾನೆಯ ಅಧಿಕಾರಿಗಳು ಹಲ್ಲೆ ನಡೆಸಿರುವ ಬಗ್ಗೆ ಮಾನ್ಯ ಅರಣ್ಯ ರಾಜ್ಯ ಸಚಿವರ ಗಮನವನ್ನು ಸೆಳೆಯುತ್ತೇನೆ.